

ಅರುಣ ಪಿ. ಭಟ್ಟ

## ವಾರಭವಿಷ್ಯ 13.8.2020ರಿಂದ 19.8.2020ರವರೆಗೆ




ಆರಂಭದ ಎರಡು ದಿನದಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸ. ಮನೆ ಬಾಡಿಗೆಯಿಂದ ಧನಲಾಭ. ರಾಜಕೀಯದವರಿಗೆ ಕೈ ತಪ್ಪಿ ಹೋಗುವ ಅಧಿಕಾರ ಪ್ರಾಪ್ತಿ. ಗ್ರಂಥರಚನೆಯಲ್ಲಿ ಆಸಕ್ತಿ. ವಾಹನ ಸೌಖ್ಯ. ಮಕ್ಕಳಿಂದ ಮಾನಸಿಕ ಕಿರಿಕಿರಿ ಉಂಟಾಗುತ್ತದೆ. ನಿಮಗೆ ಬರಬೇಕಾದ ಹಣ ಬರುವುದು. ಶುಭದಿನ 17. ಶ್ರೀ ಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.




ವಾರದ ಪ್ರಾರಂಭದಲ್ಲಿ ಪ್ರವಾಸದಿಂದ ಆಗಮನ. ಸಹೋದರಿಯರಿಂದ ಶುಭವಾರ್ತೆ. ಹಸ್ತಾಲಂಕಾರ ವಸ್ತು ಖರಿದಿ. ವಾರ ಮಧ್ಯದಲ್ಲಿ ಜ್ವರ ಪೀಡೆ ವೈದ್ಯಕೀಯ ಖರ್ಚು. ಕೋರ್ಟ್ ಪ್ರಕಣದಲ್ಲಿ ಗೆಲುವು ಸಾಧ್ಯತೆ. ಅವಮಾನಕರ ಪ್ರಸಂಗ. ವಿವಾಹ ಪ್ರಸ್ತಾವದಲ್ಲಿ ಯಶಸ್ಸು. ವಾರಾಂತ್ಯದಲ್ಲಿ ಪರೋಪಕಾರ. ಶುಭದಿನ 19. ಅಷ್ಟಮಶನಿ ಪೀಡೆ ನೀವಾರಣೆಗೆ 1008 ತಿಲಾರ್ಚನೆ ಮಾಡಿರಿ.




ದೈಹಿಕ ಜಾಡ್ಯ ಅಲರ್ಜಿ ಕಾಡಿಸುತ್ತದೆ. ವಿನಾಕಾರಣ ಹೆದರಿಕೆ ಉಂಟಾಗುವುದರಿಂದ ಚಿಂತೆಗೆ ಒಳಗಾಗುತ್ತೀರಿ. ಆದರೆ, ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭ ಜರುಗುವ ಸಾಧ್ಯತೆ ಇದೆ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು. ಉತ್ತಮ ವಾಗ್ಝರಿ ಪ್ರದರ್ಶನ. ಮಾನ ಸನ್ಮಾನ. ಮೂತ್ರ ಜನಕಾಂಗ ಪೀಡೆ ಸಾಧ್ಯತೆ. ಶುಭದಿನ 18. ಕಾರ್ತಿಕೇಯ ಸ್ತೋತ್ರ ಪಠಣ ಮಾಡಿರಿ.




ವಾರದ ಪ್ರಾರಂಭದಲ್ಲಿ ಮನೆಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ ಜಾಗ್ರತೆ ವಹಿಸಿ. ವಾರವಿಡಿ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವಿರಿ. ತಂದೆಯಿಂದ ಹಣಕಾಸಿನ ಸಹಾಯ ಸಾಧ್ಯತೆ. ಕಾಲಿಗೆ ನೋವು. ಆಸ್ಪತ್ರೆಗೆ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭದಿನ 18. ಗುರುದತ್ತಾತ್ರೆಯ ಆರಾಧನೆ ಮಾಡಿರಿ. ಶ್ರೀ ದತ್ತಸ್ತವರಾಜ ಪಠಿಸಿರಿ.




ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತಗತಿಯಲ್ಲಿ ನಡೆಯುತ್ತವೆ. ಪರಿಚಿತ ಸ್ತ್ರೀ ವಿರೋಧ ಕಾಣಿಸುವುದು. ಪಶುಗಳ ವಿಕ್ರಿಯದಾರರಿಗೆ ಲಾಭ. ಹೊಟ್ಟೆನೋವು ತೊಂದರೆಯನ್ನು ಉಂಟುಮಾಡಬಹುದು. ಅಜ್ಞಾತವಾಸದಿಂದ ಬಿಡುಗಡೆ. ವ್ಯಾಪಾರ ವಹೀವಾಟಿಗೆ ಸಂಬಂಧಿಸಿದಂತೆ ಮಹತ್ವದ ಮಾತುಕತೆ ಏರ್ಪಡಲಿದೆ. ಶುಭದಿನ 17. ಹನುಮಾನ್ ಚಾಲೀಸ್ ಪಠಿಸಿರಿ.




ಅನಿರೀಕ್ಷಿತವಾಗಿ ಅಧಿಕ ಖರ್ಚಿನ ಸಂದರ್ಭ ಬರಬಹುದು. ಸರಕಾರಿ ಕೆಲಸದಲ್ಲಿ ವ್ಯತ್ಯಯ ಉಂಟಾಗುತ್ತದೆ. ನಿಮ್ಮ ಕೆಲಸಗಾರಿಂದ ಹಾನಿ ಉಂಟಾಗುತ್ತದೆ. ಇದು ನಿಮ್ಮ ಮನಸ್ಸಿಗೆ ಸ್ವಲ್ಪ ಕಿರಿಕಿರಿ ಉಂಟು ಮಾಡುತ್ತದೆ. ಬಂಧುಗಳಿಗೆ ಆಪತ್ತು. ಮನೆಕೆಲಸ ಅರ್ಧಕ್ಕೆ ನಿಲ್ಲುವುದು. ಪ್ರೇಮ ಪ್ರಸಂಗಗಳಲ್ಲಿ ಭಗ್ನತೆ. ಅಧಿಕಾರಿಗಳಿಗೆ ಹಿನ್ನಡೆ. ಶುಭದಿನ 14. ಗೋಪೂಜೆ ಮಾಡಿರಿ. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.




ವಾರದ ಆರಂಭದಲ್ಲಿಯೇ ಉತ್ತಮ ಫಲ ಪ್ರಾಪ್ತಿಯಾಗುತ್ತದೆ. ಆಕಸ್ಮಿಕ ಧನಲಾಭವಾಗುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹಾಪೆಕ್ಷಿಗಳಿಗೆ ಸಂಗಾತಿ ಲಭ್ಯ. ಮನೆಗೆಲಸದ ಹೊಸ ಸೇವಕರು ಸಿಗುವರು. ವ್ಯಾಪಾರದಲ್ಲಿ ಲಾಭ. ಕುಟುಂಬ ಸೌಖ್ಯ. ಶುಭದಿನ 16. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಸಾಡೆಸಾತಿಯ ಕೊನೆ ಹಂತ ಪ್ರಾರಂಭವಾಗಿದೆ. ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ಪರದೇಶ ಪ್ರವಾಸಕ್ಕೆ ಸಿದ್ಧತೆ ನಡೆಯುವುದು. ಸರಕಾರಿ ಅಧಿಕಾರ ಪ್ರಾಪ್ತಿ ಆಗುವ ಯೋಗವಿದೆ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ ಕಾಡಬಹುದು. ಪ್ರಾಣಾಪಾಯ ಭೀತಿಯಿಂದ ದೂರವಾಗುತ್ತೀರಿ. ಶುಭದಿನ 19. ದುರ್ಗಾ ಆರಾಧನೆ ಮಾಡಿರಿ.




ಆರೋಗ್ಯದಲ್ಲಿ ಏರುಪೇರು. ಸಂಗಾತಿಯೊಡನೆ ಜಗಳ. ಕಚೇರಿ ಕಾಗದ ಪತ್ರಗಳು ಕಾಣೆ ಆಗುವುದರಿಂದ ಹುಡುಕಾಟದಲ್ಲಿ ತೊಡಗುತ್ತೀರಿ. ದೂರದಿಂದ ಅಶುಭವಾರ್ತೆ ಬರುವುದು. ದೈನಂದಿನ ಕೆಲಸಗಳು ಸರಾಗವಾಗುತ್ತವೆ. ದಿಢೀರ್ ಹಿರಿಯರ ಅಧಿಕಾರಿಗಳ ಆಗಮನ. ಸ್ತ್ರೀ ಮೂಲಕ ದ್ರವ್ಯ ಲಾಭ. ದೇವತಾ ಪೂಜೆ ನಡೆಯುವುದು. ಶುಭದಿನ 15. ಗಣಪತಿಗೆ 1008 ದೂರ್ವಾರ್ಚನೆ ಮಾಡಿರಿ.




ಆಕಸ್ಮಾತ್ ಪೂರ್ವದಿಕ್ಕಿನಲ್ಲಿ ಅಪಘಾತ ಆಗಬಹುದು ಎನ್ನುವ ಭಯ ಕಾಡುತ್ತದೆ. ಕಾಲು ನೋವಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಕೌಟುಂಬಿಕ ಖರ್ಚು ಜಾಸ್ತಿಯಾಗುವುದು. ಶತ್ರುಗಳು ತಮ್ಮ ತಪ್ಪಿಗಾಗಿ ತಲೆ ತಗ್ಗಿಸುವರು. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ದಾಂಪತ್ಯ ಸೌಖ್ಯ. ಹಣಕಾಸಿನ ಲಭ್ಯತೆ. ಶುಭದಿನ 17. ನವಗ್ರಹ ಸ್ತೋತ್ರ ಮಾಡಿರಿ. ತೊಗರಿ ದಾನ ಮಾಡಿ.




ಪ್ರಾರಂಭದಿಂದಲೂ ಶುಭಯೋಗ. ಯಾಂತ್ರಿಕ ವಸ್ತುಗಳ ಖರೀದಿ. ಶೈಕ್ಷಣಿಕ ಖಾತೆಯಲ್ಲಿ ಕೆಲಸದಲ್ಲಿರುವವರಿಗೆ ತಾತ್ಕಾಲಿಕ ಬಡ್ತಿ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನಿರೀಕ್ಷೆಗಿಂತ ಲಾಭ. ಗುತ್ತಿಗೆದಾರರು ಉತ್ತಮ ಧನ ಲಾಭ ಕಾಣುವಿರಿ. ಮಿತ್ರರಿಂದ ವಂಚನೆ ಸಂಭವ. ಮಕ್ಕಳ ಅನಾರೋಗ್ಯ. ಶುಭದಿನ 19. ನಾಗ ಪೂಜೆ ಕ್ಷೀರಾಭಿಷೇಕ ಮಾಡಿರಿ.




ವಿನಾಕಾರಣ ಮಿತ್ರರು ಶತ್ರುಗಳಾಗುವರು. ಮೇಲಧಿಕಾರಿಗಳಿಂದ ಭಯ ಬರಬಹುದು. ಕಲಾವಿದರಿಗೆ ಸಂಗೀತಗಾರರಿಗೆ ವಾರದ ಮೊದಲಾರ್ಧ ಉತ್ತಮ. ಸೊಂಟನೋವು ಕಾಣಿಸುವುದು. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ಕೆಟ್ಟ ಜನರಿಂದ ಧನಪ್ರಾಪ್ತಿ. ಕುಟುಂಬ ಸೌಖ್ಯ. ಶುಭದಿನ 16. ಆದಿತ್ಯ ಹೃದಯ ಏಳು ಸಾರಿ ಪಠಿಸಿರಿ. ಗೋಪೂಜೆ ಮಾಡಿರಿ.